



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಸತ್ಯವಿಶ್ವಾಸಿಗಳೇ, ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ಮೀರಿ ಮುನ್ನಡೆಯ ಬೇಡಿರಿ[1] ಮತ್ತು ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನು ಸರ್ವವನ್ನೂ ಆಲಿಸುವವನು ಮತ್ತು ಬಲ್ಲವ ನಾಗಿದ್ದಾನೆ.

يٰۤاَيُّهَا الَّذِيْنَ اٰمَنُوْا لَا تُقَدِّمُوْا بَيْنَ
يَدَيِ اللّٰهِ وَرَسُوْلِهٖ وَاتَّقُوا اللّٰهَ ؕ اِنَّ
اللّٰهَ سَمِيْعٌ عَلِيْمٌ ①

2. ಸತ್ಯವಿಶ್ವಾಸಿಗಳೇ, ನಿಮ್ಮ ಧ್ವನಿಯನ್ನು ಪ್ರವಾದಿವರ್ಯರ ಧ್ವನಿಗಿಂತ ಎತ್ತರಿಸಬೇಡಿರಿ ಮತ್ತು ನೀವು ಪರಸ್ಪರರೊಡನೆ ಮಾತನಾಡುವಂತೆ ಪ್ರವಾದಿವರ್ಯರೊಡನೆ ಉಚ್ಚ ಸ್ವರದಿಂದ ಮಾತನಾಡಬೇಡಿರಿ- ನಿಮಗೆ ಅರಿವೇ ಇಲ್ಲದಂತೆ ನಿಮ್ಮ ಕರ್ಮಗಳೆಲ್ಲವೂ ನಷ್ಟವಾಗಿ ಬಿಡದಿರಲಿ.

يٰۤاَيُّهَا الَّذِيْنَ اٰمَنُوْا لَا تَرْفَعُوْۤا اَصْوَاتَكُمْ
فَوْقَ صَوْتِ النَّبِيِّ وَلَا تَجْهَرُوْا لَهٗ
بِالْقَوْلِ كَجَهْرِ بَعْضِكُمْ لِبَعْضٍ اَنْ
تَحْبَطَ اَعْمَالُكُمْ وَاَنْتُمْ لَا تَشْعُرُوْنَ ②

3. ಅಲ್ಲಾಹನ ಸಂದೇಶವಾಹಕರ ಸನ್ನಿಧಿಯಲ್ಲಿ ಮಾತನಾಡುವಾಗ ತಮ್ಮ ಧ್ವನಿಯನ್ನು ತಗ್ಗಿಸಿಕೊಳ್ಳುವವರ ಹೃದಯಗಳನ್ನು ಅಲ್ಲಾಹನು 'ಧರ್ಮನಿಷ್ಠೆ'ಗಾಗಿ ಪರೀಕ್ಷಿಸಿದ್ದಾನೆ.[2] ಅವರಿಗೆ ಕ್ಷಮೆಯೂ ಅತಿ ದೊಡ್ಡ ಪ್ರತಿಫಲವೂ ಇದೆ.

اِنَّ الَّذِيْنَ يَغُضُّوْنَ اَصْوَاتَهُمْ عِنْدَ
رَسُوْلِ اللّٰهِ اُولٰٓئِكَ الَّذِيْنَ امْتَحَنَ
اللّٰهُ قُلُوْبَهُمْ لِلتَّقْوٰى ؕ لَهُمْ مَّغْفِرَةٌ
وَّاَجْرٌ عَظِيْمٌ ③

4. ಸಂದೇಶವಾಹಕರೇ, ನಿಮ್ಮನ್ನು ಮನೆಗಳ ಹೊರಗಿನಿಂದ ಕೂಗಿ ಕರೆಯುವವರ ಪೈಕಿ ಹೆಚ್ಚಿನವರು ತಿಳಿಗೇಡಿಗಳಾಗಿದ್ದಾರೆ.

اِنَّ الَّذِيْنَ يُنَادُوْنَكَ مِنْ وَّرَآءِ
الْحُجُرٰتِ اَكْثَرُهُمْ لَا يَعْقِلُوْنَ ④

1. ಅರ್ಥಾತ್- ಅಲ್ಲಾಹ್ ಮತ್ತು ರಸೂಲರನ್ನು ಮೀರಿ ನಡೆಯದಿರಿ. ಅವರ ಹಿಂದೆ ನಡೆಯಿರಿ. ಅವರ ಮುಂದಾಳುಗಳಾಗಬೇಡಿ. ಹಿಂಬಾಲಕರಾಗಿರಿ. ನಿಮ್ಮ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮುಂದುವರಿದು ಸ್ವನಿರ್ಧಾರ ಕೈಗೊಳ್ಳದಿರಿ. ಬದಲಾಗಿ ಅಲ್ಲಾಹನ ಗ್ರಂಥ ಮತ್ತು ಅವನ ಪ್ರವಾದಿಯ ಚರ್ಯೆಯಲ್ಲಿ ಅವುಗಳ ಕುರಿತು ಯಾವ ಆದೇಶ ನೀಡಲಾಗಿದೆ ಎಂದು ಮೊದಲು ನೋಡಿಕೊಳ್ಳಿರಿ.

2. ಅರ್ಥಾತ್- ಯಾರು ಅಲ್ಲಾಹನ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೋ ಮತ್ತು ಯಾರು ಪರೀಕ್ಷೆಗಳ ಮೂಲಕ ದಾಟಿ ಮನಸ್ಸಿನಲ್ಲಿ ನಿಜವಾಗಿಯೂ 'ದೇವಭಕ್ತಿ' ಇದೆಯೆಂದು ಸಾಬೀತು ಪಡಿಸಿದ್ದಾರೋ ಅವರೇ ಅಲ್ಲಾಹನ ಪ್ರವಾದಿಯ ಬಗ್ಗೆ ತೋರಬೇಕಾದ ಗೌರವಾದರಗಳನ್ನು ಗಮನಿಸುವವರಾಗಿದ್ದಾರೆ. ಪ್ರವಾದಿಯ ಬಗ್ಗೆ ಗೌರವಾದರ ಇಲ್ಲದ ಹೃದಯ ದೇವಭಕ್ತಿಯಿಂದಲೂ ಮುಕ್ತವಾಗಿರುತ್ತದೆ ಎಂದೂ ಈ ವಾಣಿಯಿಂದ ವ್ಯಕ್ತವಾಗುತ್ತದೆ.

5. ನೀವು ಹೊರ ಬರುವ ತನಕ ಅವರು ತಾಳ್ಮೆ ವಹಿಸುತ್ತಿದ್ದರೆ ಅದು ಅವರಿಗೇ ಒಳ್ಳೆಯದಿತ್ತು.[3] ಅಲ್ಲಾಹನು ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ.

وَلَوْ أَنَّهُمْ صَبَرُوا حَتَّىٰ تَخْرُجَ إِلَيْهِمْ
لَكَانَ خَيْرًا لَّهُمْ ۚ وَاللَّهُ غَفُورٌ رَّحِيمٌ ⑤

6. ಸತ್ಯವಿಶ್ವಾಸಿಗಳೇ, ಕರ್ಮಭ್ರಷ್ಟನೊಬ್ಬನು ನಿಮ್ಮ ಬಳಿಗೇನಾದರೂ ಸುದ್ದಿ ತಂದರೆ ಆ ಕುರಿತು ತನಿಖೆ ಮಾಡಿರಿ. (ಏಕೆಂದರೆ) ನೀವು ಪ್ರಮಾದವಶಾತ್ ಒಂದು ಸಮೂಹಕ್ಕೆ ಹಾನಿ ಮಾಡಿ ಆ ಬಳಿಕ ನಿಮ್ಮ ಕೃತ್ಯದ ಬಗ್ಗೆ ಪಶ್ಚಾತ್ತಾಪ ಪಡುವಂತಾಗಬಾರದು.[4]

يَا أَيُّهَا الَّذِينَ آمَنُوا إِن جَاءَكُمْ
فَاسِقٌ بِنَبَإٍ فَتَبَيَّنُوا أَن تُصِيبُوا
قَوْمًا بِجَهَالَةٍ فَتُصْبِحُوا عَلَىٰ مَا
فَعَلْتُمْ نَادِمِينَ ⑥

7-8. ನಿಮ್ಮ ನಡುವೆ ಅಲ್ಲಾಹನ ಸಂದೇಶವಾಹಕರಿದ್ದಾರೆ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ. ಹೆಚ್ಚಿನ ವಿಷಯಗಳಲ್ಲಿ, ಅವರು ನಿಮ್ಮ ಮಾತನ್ನು ಅನುಸರಿಸಿದರೆ, ನೀವು ಸ್ವತಃ ಸಂಕಷ್ಟಕ್ಕೊಳಗಾಗುವಿರಿ. ಆದರೆ, ಅಲ್ಲಾಹನು ನಿಮಗೆ ಸತ್ಯವಿಶ್ವಾಸವನ್ನು ಪ್ರಿಯಗೊಳಿಸಿದನು. ಅದನ್ನು ನಿಮ್ಮ ಮನಸ್ಸಿಗೆ ಆಕರ್ಷಕವಾಗಿ ಮಾಡಿದನು ಮತ್ತು ಸತ್ಯನಿಷೇಧ, ಕರ್ಮಭ್ರಷ್ಟತೆ ಹಾಗೂ ಆಜ್ಞೋಲ್ಲಂಘನೆಯ ಬಗ್ಗೆ ನೀವು ಜಿಗುಪ್ಸೆ ತಾಳುವಂತೆ ಮಾಡಿದನು. ಇಂತಹವರೇ ಅಲ್ಲಾಹನ ಅನುಗ್ರಹ ಹಾಗೂ ಕೃಪೆಯಿಂದ ಸನ್ಮಾರ್ಗಗಾಮಿಗಳಾಗಿರುವರು. ಅಲ್ಲಾಹನು ಸರ್ವಜ್ಞನೂ ಯುಕ್ತಿವಂತನೂ ಆಗಿರುತ್ತಾನೆ.

وَاعْلَمُوا أَنَّ فِيكُمْ رَسُولَ اللَّهِ ۚ لَوْ
يُطِيعُكُمْ فِي كَثِيرٍ مِّنَ الْأَمْرِ لَعَنِتُّمْ
وَلَٰكِنَّ اللَّهَ حَبَّبَ إِلَيْكُمُ الْإِيمَانَ
وَزَيَّنَهُ فِي قُلُوبِكُمْ وَكَرَّهَ إِلَيْكُمُ
الْكُفْرَ وَالْفُسُوقَ وَالْعِصْيَانَ ۚ أُولَٰئِكَ
هُمُ الرَّاشِدُونَ ⑦ فَضْلًا مِّنَ اللَّهِ
وَنِعْمَةً ۚ وَاللَّهُ عَلِيمٌ حَكِيمٌ ⑧

9. ಸತ್ಯವಿಶ್ವಾಸಿಗಳಲ್ಲಿ ಎರಡು ಗುಂಪುಗಳು ಪರಸ್ಪರ ಜಗಳಾಡಿದರೆ,[5] ಅವರ ನಡುವೆ ಸಂಧಾನ ಮಾಡಿಸಿರಿ. ಅವರಲ್ಲಿ ಒಂದು ಗುಂಪು

وَإِن طَائِفَتَانِ مِنَ الْمُؤْمِنِينَ اقْتَتَلُوا
فَأَصْلِحُوا بَيْنَهُمَا ۖ فَإِن بَغَتْ إِحْدَاهُمَا

3. ಅರೇಬಿಯಾದ ಸುತ್ತಮುತ್ತಲಿನಿಂದ ಬರುವವರಲ್ಲಿ ಕೆಲವು ಅಸಭ್ಯ ವ್ಯಕ್ತಿಗಳೂ ಇದ್ದರು. ಅವರು ಪ್ರವಾದಿವರ್ಯರನ್ನು(ಸ) ಭೇಟಿಯಾಗಲು ಬರುವಾಗ ಸೇವಕನ ಮೂಲಕ ಸುದ್ದಿ ಮುಟ್ಟಿಸುವ ಗೊಡವೆಗೂ ಹೋಗುತ್ತಿರಲಿಲ್ಲ. ಬದಲಾಗಿ ಪ್ರವಾದಿ ಪತ್ನಿಯರ ಕೊಠಡಿಗಳನ್ನು ಸುತ್ತಿ ಹೊರಗೆಯೇ ನಿಂತು ಕೂಗಿ ಕರೆಯುತ್ತಿದ್ದರು. ಆ ವ್ಯಕ್ತಿಗಳ ಇಂತಹ ಧೋರಣೆಯಿಂದ ಪ್ರವಾದಿವರ್ಯರಿಗೆ(ಸ) ತೀವ್ರ ನೋವುಂಟಾಗುತ್ತಿತ್ತು. ಆದರೆ ಅವರು ತಮ್ಮ ಸ್ವಭಾವ ಸಹಜವಾದ ಸೌಜನ್ಯದಿಂದ ಅದನ್ನು ಸಹಿಸಿಕೊಳ್ಳುತ್ತಿದ್ದರು. ಕೊನೆಗೆ ಅಲ್ಲಾಹನು ಸ್ವತಃ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಿದನು. ಈ ಅರೋಚಕ ನಡವಳಿಕೆಯನ್ನು ಖಂಡಿಸುತ್ತಾ, ಜನರು ಅವರನ್ನು ಭೇಟಿಯಾಗಲು ಬರುವಾಗ ಅವರು ಅಲ್ಲಿರದಿದ್ದರೆ ನಿರಂತರ ಕೂಗಿ ಕರೆಯುವ ಬದಲು ತಾಳ್ಮೆಯಿಂದ ಕುಳಿತು ಅವರು ಸ್ವತಃ ಹೊರಗೆ ಬರುವ ವರೆಗೆ ಕಾಯಬೇಕು ಎಂದು ಅಲ್ಲಾಹನು ನಿರ್ದೇಶವಿತ್ತನು.

4. ಈ ಸೂಕ್ತದ ಮೂಲಕ ಮುಸ್ಲಿಮರಿಗೆ ಒಂದು ತಾತ್ವಿಕ ನಿರ್ದೇಶನ ಕೊಡಲಾಗಿದೆ. ದೊಡ್ಡ ಪರಿಣಾಮವನ್ನುಂಟು ಮಾಡಬಹುದಾದ ಪ್ರಮುಖ ಸುದ್ದಿ ನಿಮಗೆ ತಲಪಿದರೆ ಸುದ್ದಿ ತರುವವನು ಎಂತಹ ವ್ಯಕ್ತಿ ಎಂದು ಮೊದಲು ನೋಡಿಕೊಳ್ಳಿರಿ. ಅವನು ಧರ್ಮಭ್ರಷ್ಟನಾಗಿದ್ದರೆ, ಅರ್ಥಾತ್ ಅವನು ವಿಶ್ವಾಸಾರ್ಹ ವ್ಯಕ್ತಿಯಲ್ಲವೆಂದು ಮೇಲ್ನೋಟಕ್ಕೆ ವ್ಯಕ್ತವಾಗುತ್ತಿದ್ದರೆ ಅವನು ತಲಪಿಸಿದ ಸುದ್ದಿಯನ್ನು ಪಾಲಿಸುವ ಮೊದಲು ಸತ್ಯಸಂಗತಿ ಏನೆಂದು ಪರಾಂಬರಿಸಿ ಕೊಳ್ಳಿರಿ.

5. "ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪಿನವರು ಪರಸ್ಪರ ಜಗಳಾಡಿದರೆ" ಎಂದು ಇಲ್ಲಿ ಹೇಳಲಾಗಿಲ್ಲ. ಬದಲಾಗಿ, "ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪಿನ ನಡುವೆ ಜಗಳ ಆಗಿ ಬಿಟ್ಟರೆ" ಎಂದು ಹೇಳಲಾಗಿದೆ. ಪರಸ್ಪರ ಜಗಳಾಡುವುದು ಮುಸ್ಲಿಮರಿಗೆ ಭೂಷಣವಲ್ಲ ಮತ್ತು ಹಾಗೆ ಎಂದೂ ಆಗಬಾರದು ಎಂಬ ಆಶಯ ಈ ಪದಗಳಿಂದ ಧ್ವನಿಸುತ್ತವೆ. ಅವರು ಸತ್ಯವಿಶ್ವಾಸಿಗಳಾಗಿರುತ್ತಾ ಪರಸ್ಪರ

ಇನ್ನೊಂದು ಗುಂಪಿನ ಮೇಲೆ ಅತಿರೇಕವೆಸಗಿದರೆ, ಅತಿರೇಕವೆಸಗಿದವರು ಅಲ್ಲಾಹನ ಆದೇಶದೆಡೆಗೆ ಮರಳಿ ಬರುವ ವರೆಗೂ ಅವರ ವಿರುದ್ಧ ಹೋರಾಡಿರಿ. ತರುವಾಯ ಅವರು ಮರಳಿ ಬಂದರೆ, ಅವರ ಮಧ್ಯೆ ನ್ಯಾಯಪೂರ್ಣ ಸಂಧಾನ ಮಾಡಿಸಿಬಿಡಿರಿ ಮತ್ತು ನ್ಯಾಯವನ್ನು ಪಾಲಿಸಿರಿ. ಅಲ್ಲಾಹನು ನ್ಯಾಯ ಪರಿಪಾಲಕರನ್ನು ಪ್ರೀತಿಸುತ್ತಾನೆ.

عَلَى الْأُخْرٰى فَقَاتِلُوا الَّتِيْ تَبْغِيْ حَتّٰى تَفِيْٓءَ اِلٰٓى اَمْرِ اللّٰهِ ۚ فَاِنْ فَآءَتْ فَاَصْلِحُوْا بَيْنَهُمَا بِالْعَدْلِ وَاَقْسِطُوْا ۗ اِنَّ اللّٰهَ يُحِبُّ الْمُقْسِطِيْنَ ﴿٩﴾

10. ಸತ್ಯವಿಶ್ವಾಸಿಗಳಂತು ಪರಸ್ಪರ ಸಹೋದರರು. ಆದುದರಿಂದ ನಿಮ್ಮ ಸಹೋದರರ ನಡುವೆ ಸಂಬಂಧಗಳನ್ನು ಸರಿಪಡಿಸಿರಿ ಮತ್ತು ಅಲ್ಲಾಹನಿಗೆ ಭಯಪಡಿರಿ. ನಿಮ್ಮ ಮೇಲೆ ಕೃಪೆ ತೋರಲಾಗುವುದೆಂದು ನಿರೀಕ್ಷಿಸಬಹುದು.

اِنَّمَا الْمُؤْمِنُوْنَ اِخْوَةٌ فَاَصْلِحُوْا بَيْنَ اَخَوَيْكُمْ وَاتَّقُوا اللّٰهَ لَعَلَّكُمْ تُرْحَمُوْنَ ﴿١٠﴾

11. ಸತ್ಯವಿಶ್ವಾಸಿಗಳೇ, ಪುರುಷರು ಇತರ ಪುರುಷರನ್ನು ಅಪಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂಬಹುದು ಮತ್ತು ಸ್ತ್ರೀಯರು ಇತರ ಸ್ತ್ರೀಯರನ್ನೂ ಅಪಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂಬಹುದು.[6] ಪರಸ್ಪರರನ್ನು ನಿಂದಿಸಬೇಡಿರಿ[7] ಮತ್ತು ಒಬ್ಬರು ಇನ್ನೊಬ್ಬರನ್ನು ಅಡ್ಡ ಹೆಸರಿನಿಂದ ಕರೆಯಬೇಡಿರಿ. ಸತ್ಯವಿಶ್ವಾಸ ಸ್ವೀಕರಿಸಿದ ಬಳಿಕ ಕರ್ಮಭ್ರಷ್ಟತೆಯಲ್ಲಿ ಹೆಸರು ಗಳಿಸುವುದು ಬಹಳ ಕೆಟ್ಟದು.[8] ಈ ನಿಲುಮೆಯನ್ನು ತೊರೆಯದವರು ಅಕ್ರಮಿಗಳಾಗಿರುವರು.

يٰٓاَيُّهَا الَّذِيْنَ اٰمَنُوْا لَا يَسْخَرْ قَوْمٌ مِّنْ قَوْمٍ عَسٰٓى اَنْ يَّكُوْنُوْا خَيْرًا مِّنْهُمْ وَلَا نِسَآءٌ مِّنْ نِّسَآءٍ عَسٰٓى اَنْ يَّكُنَّ خَيْرًا مِّنْهُنَّ ۚ وَلَا تَلْمِزُوْٓا اَنْفُسَكُمْ وَلَا تَنَابَزُوْا بِالْاَلْقَابِ ۗ بِئْسَ الِاسْمُ الْفُسُوْقُ بَعْدَ الْاِيْمَانِ ۚ وَمَنْ لَّمْ يَتُبْ فَاُولٰٓئِكَ هُمُ الظّٰلِمُوْنَ ﴿١١﴾

ಜಗಳಾಡುವುದು ನಿರೀಕ್ಷೆಗೆ ನಿಲುಕುವಂತಹ ವಿಚಾರವೂ ಅಲ್ಲ. ಆದರೆ ಅಪ್ಪಿತಪ್ಪಿ ಎಲ್ಲಾದರೂ ಹೀಗೆ ಸಂಭವಿಸಿದರೆ ಮುಂದೆ ವಿವರಿಸಲಾಗಿರುವಂತಹ ಕಾರ್ಯನೀತಿಯನ್ನು ಅನುಸರಿಸಬೇಕು.

6. ಅಪಹಾಸ್ಯ ಮಾಡುವುದೆಂದರೆ ಕೇವಲ ನಾಲಗೆಯಿಂದ ಅಪಹಾಸ್ಯ ಮಾಡುವುದಲ್ಲ. ಬದಲಾಗಿ ಯಾರದಾದರೂ ಅನುಕರಣೆ ಮಾಡುವುದು, ಯಾರನ್ನಾದರೂ ಬೊಟ್ಟು ಮಾಡಿ ತೋರಿಸುವುದು, ವ್ಯಕ್ತಿಯ ಮಾತು, ಕೃತಿ, ರೂಪ ಅಥವಾ ಉಡುಪಿನ ಬಗ್ಗೆ ನಗೆಯಾಡುವುದು, ಒಬ್ಬನ ದೌರ್ಬಲ್ಯ ಅಥವಾ ದೋಷದ ಬಗ್ಗೆ ಅವನು ನಗೆಪಾಟಲಿಗೆ ಗುರಿಯಾಗುವಂತೆ ಪ್ರಸ್ತಾಪ ಮಾಡುವುದು ಮುಂತಾದವುಗಳೆಲ್ಲವೂ ಅಪಹಾಸ್ಯದ ಸಾಲಿಗೆ ಸೇರಿವೆ.

7. ನಿಂದಿಸುವುದೆಂದರೆ ಮನನೋಯಿಸುವುದು, ವ್ಯಂಗ್ಯಕ್ಕೀಡು ಮಾಡುವುದು, ಆಕ್ಷೇಪವೆತ್ತುವುದು, ಆರೋಪ ಮಾಡುವುದು, ಹುಳುಕು ಹುಡುಕುವುದು, ಬಹಿರಂಗವಾಗಿ ಅಥವಾ ಗುಪ್ತವಾಗಿ ಯಾರನ್ನಾದರೂ ನಿಂದನೆಗೀಡು ಮಾಡುವುದು ಮುಂತಾದ ಕೆಲಸಗಳೆಲ್ಲವೂ ಸೇರಿವೆ.

8. ವ್ಯಕ್ತಿಯನ್ನು ಅಪಮಾನಕ್ಕೀಡು ಮಾಡುವಂತಹ ಹೆಸರಿನಿಂದ ಕರೆಯಬಾರದು ಮತ್ತು ಬಿರುದು ನೀಡಬಾರದು ಎಂಬುದು ಈ ಆದೇಶದ ಇಂಗಿತ. ಉದಾ: ಒಬ್ಬನನ್ನು ಧರ್ಮಭ್ರಷ್ಟ ಅಥವಾ ಕಪಟವಿಶ್ವಾಸಿ ಎಂದು ಕರೆಯುವುದು, ಒಬ್ಬನನ್ನು ಕುಂಟ, ಕುರುಡ ಅಥವಾ ಒಕ್ಕಣ್ಣನೆನ್ನುವುದು, ಒಬ್ಬನನ್ನು ಅವನ ಅಥವಾ ಅವನ ಮಾತಾಪಿತರ ಇಲ್ಲವೇ ಮನೆತನದ ಯಾವುದಾದರೂ ದೋಷದ ಆಧಾರದಲ್ಲಿ ಹೆಸರಿಟ್ಟು ಕರೆಯುವುದು, ಮುಸ್ಲಿಮನಾದ ನಂತರವೂ ಒಬ್ಬನನ್ನು ಅವನ ಹಿಂದಿನ ಧರ್ಮದ ಆಧಾರದಲ್ಲಿ ಯಹೂದಿ ಅಥವಾ ಕ್ರೈಸ್ತನೆಂದು ಕರೆಯುವುದು, ಒಬ್ಬ ವ್ಯಕ್ತಿ, ಕುಟುಂಬ, ಭ್ರಾತೃತ್ವ ಅಥವಾ ಗುಂಪಿಗೆ ಅಪಮಾನ ಜನಕವಾದ ಹೆಸರನ್ನಿಡುವುದು ಇತ್ಯಾದಿ. ಮೇಲ್ನೋಟಕ್ಕೆ ಕೆಟ್ಟದ್ದಾಗಿ ಕಂಡರೂ ನಿಂದನೆಯ ಉದ್ದೇಶವಿಲ್ಲದ ಗುರುತಿಸಲಿಕ್ಕಾಗಿ ಉಪಯೋಗಿಸಲ್ಪಡುವ ಬಿರುದುಗಳು ಇದಕ್ಕೆ ಹೊರತಾಗಿವೆ. ಉದಾ: ಕುರುಡು ವೈದ್ಯರು. ಇಂತಹ ಉದ್ಧರಣೆಗಳ ಉದ್ದೇಶ ಪರಿಚಯ ಮಾಡಿಸುವುದೇ ಹೊರತು ನಿಂದನೆಯಲ್ಲ.

12. ಸತ್ಯವಿಶ್ವಾಸಿಗಳೇ, ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯ ವಾಗಿಯೂ ಕೆಲವು ಗುಮಾನಿಗಳು ಪಾಪವಾಗಿವೆ.[9] ದೋಷಾನ್ವೇಷಣೆ ಮಾಡದಿರಿ.[10] ನಿಮ್ಮಲ್ಲಿ ಯಾರೂ ಯಾರ ಬಗ್ಗೆಯೂ ಪರದೂಷಣೆ ಮಾಡಬಾರದು.[11] ನಿಮ್ಮಲ್ಲಿ ಯಾರಾದರೂ ತನ್ನ ಮೃತ ಸಹೋದ ರನ ಮಾಂಸ ತಿನ್ನುವುದನ್ನು ಇಷ್ಟಪಡುವನೇ?[12] ನೀವು ಸ್ವತಃ ಇದನ್ನು ಅಸಹ್ಯಪಡುತ್ತೀರಿ. ಅಲ್ಲಾಹನನ್ನು ಭಯಪಡಿರಿ, ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.

13. ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ

يَٰٓأَيُّهَا ٱلَّذِينَ ءَامَنُوا۟ ٱجْتَنِبُوا۟ كَثِيرًا
مِّنَ ٱلظَّنِّ إِنَّ بَعْضَ ٱلظَّنِّ إِثْمٌ ۖ وَلَا
تَجَسَّسُوا۟ وَلَا يَغْتَب بَّعْضُكُم بَعْضًا ۚ
أَيُحِبُّ أَحَدُكُمْ أَن يَأْكُلَ لَحْمَ أَخِيهِ
مَيْتًا فَكَرِهْتُمُوهُ ۚ وَٱتَّقُوا۟ ٱللَّهَ ۚ إِنَّ
ٱللَّهَ تَوَّابٌ رَّحِيمٌ ﴿١٢﴾
يَٰٓأَيُّهَا ٱلنَّاسُ إِنَّا خَلَقْنَٰكُم مِّن ذَكَرٍ

9. ಗುಮಾನಿಯಿಂದ ಸಂಪೂರ್ಣವಾಗಿ ತಡೆಯಲಾಗಿಲ್ಲ. ಬದಲಾಗಿ ಹೆಚ್ಚು ಗುಮಾನಿ ಪಡುವುದರಿಂದ ಮತ್ತು ಪ್ರತಿಯೊಂದು ಗುಮಾನಿಯನ್ನೂ ಪಾಲಿಸುವುದರಿಂದ ತಡೆಯಲಾಗಿದೆ. ಕೆಲವೊಂದು ಗುಮಾನಿಗಳು ಪಾಪವಾಗಿರುತ್ತವೆ ಎಂದು ಹೇಳಿರುವುದರ ಜತೆಗೆ ಅದರ ಕಾರಣವನ್ನೂ ತಿಳಿಸಲಾಗಿದೆ. ಒಬ್ಬ ವ್ಯಕ್ತಿ ಯಾವುದೇ ವ್ಯಕ್ತಿಯ ಬಗ್ಗೆ ವಿನಾ ಕಾರಣ ಗುಮಾನಿ ಪಡುವುದು ಪಾಪವಾಗಿದೆ. ಇತರರ ಬಗ್ಗೆ ಅಭಿಪ್ರಾಯ ತಾಳುವಾಗ ಸಂಶಯದಿಂದಲೇ ಆರಂಭಿಸುವುದು ಅಥವಾ ಪ್ರತ್ಯಕ್ಷವಾಗಿಯೇ ಸಭ್ಯರೆಂದು ವ್ಯಕ್ತವಾಗುವ ವ್ಯಕ್ತಿಗಳ ಬಗ್ಗೆ ಸಂಶಯದಿಂದ ವರ್ತಿಸುವುದು ಕೂಡ ಪಾಪವಾಗಿದೆ. ಹಾಗೆಯೇ ಒಬ್ಬ ವ್ಯಕ್ತಿಯ ಮಾತು-ಕೃತಿಯಲ್ಲಿ ಒಳಿತು ಕೆಡುಕುಗಳ ಸಮಾನ ಸಾಧ್ಯತೆಯಿದ್ದರೆ ಅದರ ಬಗ್ಗೆ ಸಂಶಯ ತಾಳಿ ಕೆಡುಕು ಮಾತ್ರ ಇದೆ ಎಂದು ತೀರ್ಮಾನಿಸಿ ಬಿಡುವುದು ಸಹ ಪಾಪವಾಗಿದೆ.

10. ಅರ್ಥಾತ್- ಜನರ ರಹಸ್ಯಗಳನ್ನು ಹುಡುಕದಿರಿ. ಪರಸ್ಪರ ದೋಷಾನ್ವೇಷಣೆ ಮಾಡದಿರಿ. ಇನ್ನೊಬ್ಬನ ಸ್ಥಿತಿಗತಿ ಮತ್ತು ವ್ಯವಹಾರಗಳ ಬೆನ್ನು ಹತ್ತದಿರಿ. ಜನರ ವೈಯಕ್ತಿಕ ಪತ್ರಗಳನ್ನೋದುವುದು, ಇಬ್ಬರ ಮಾತನ್ನು ಕಿವಿಗೊಟ್ಟು ಕೇಳುವುದು, ನೆರೆಮನೆಯಲ್ಲಿ ಇಣುಕುವುದು, ವಿಭಿನ್ನ ರೀತಿಯಿಂದ ಇತರರ ವೈಯಕ್ತಿಕ ಜೀವನ ಅಥವಾ ವ್ಯವಹಾರಗಳನ್ನು ಶೋಧಿಸುವುದು ಇವೆಲ್ಲವೂ ನಿಷೇಧಿಸಲ್ಪಟ್ಟ ದೋಷಾನ್ವೇಷಣೆಯಲ್ಲಿ ಸೇರಿದೆ.

11. 'ಪರನಿಂದೆ' ಎಂದರೇನೆಂದು ಪ್ರವಾದಿವರ್ಯರೊಡನೆ(ಸ) ಕೇಳಲಾಯಿತು. ಅವರು ಹೇಳಿದರು, "ನೀನು ನಿನ್ನ ಸಹೋದರನ ಬಗ್ಗೆ ಅವನಿಗೆ ಅಸಮಾಧಾನ ಉಂಟಾಗುವಂತಹ ರೀತಿಯಲ್ಲಿ ಪ್ರಸ್ತಾಪಿಸುವುದು." "ನಾನು ಪ್ರಸ್ತಾಪಿಸುವಂತಹ ವಿಷಯ ನನ್ನ ಸಹೋದರನಲ್ಲಿದ್ದರೆ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಲಾಯಿತು. ಅದಕ್ಕೆ ಅವರು ಹೇಳಿದರು, "ಅವನಲ್ಲಿ ಆ ವಿಷಯ ಇದ್ದಾಗಲೇ ಅದು ಪರನಿಂದೆ ಎನಿಸಿಕೊಳ್ಳುತ್ತದೆ. ಇಲ್ಲದಿದ್ದರೆ ಅದು ಆರೋಪವೆನಿಸಿಕೊಳ್ಳುತ್ತದೆ." ಒಬ್ಬ ವ್ಯಕ್ತಿಯ ಬೆನ್ನ ಹಿಂದೆ ಅಥವಾ ಅವನ ನಿಧನಾನಂತರ ಅವನ ಕೆಡುಕುಗಳನ್ನು ಪ್ರಸ್ತಾಪಿಸುವ ಅನಿವಾರ್ಯತೆ ಎದುರಾದರೆ ಆ ಅನಿವಾರ್ಯತೆ ಶರೀಅತ್‌ಗೆ ಬದ್ಧವಾಗಿದ್ದರೆ ಮತ್ತು ಪರನಿಂದೆಯ ವಿನಾ ಅದು ಈಡೇರದಿದ್ದರೆ ಹಾಗೂ ಪರನಿಂದೆ ಮಾಡದಿದ್ದರೆ ಅದಕ್ಕಿಂತ ಮಿಗಿಲಾದ ಕೆಡುಕು ತಲೆದೋರುವ ಸಾಧ್ಯತೆಯಿದ್ದರೆ ಅಂತಹ ಸಂದರ್ಭಗಳು ಅದರ ನಿಷೇಧಕ್ಕೆ ಹೊರತಾಗಿವೆ. ಈ ಅಪವಾದವನ್ನು ಪ್ರವಾದಿವರ್ಯರು(ಸ) ತಾತ್ವಿಕವಾಗಿ ಹೀಗೆ ವಿವರಿಸಿದ್ದಾರೆ, "ಯಾವುದೇ ಮುಸ್ಲಿಮನ ಘನತೆಯ ಮೇಲೆ ಅನ್ಯಾಯವಾಗಿ ಆಕ್ರಮಣ ನಡೆಸುವುದು ಅತ್ಯಂತ ಹೇಯ ಅತಿಕ್ರಮವಾಗಿದೆ". ಇಲ್ಲಿ 'ಅನ್ಯಾಯವಾಗಿ' ಎಂಬ ಶರತ್ತು ಒಡ್ಡಲಾಗಿರುವುದು 'ನ್ಯಾಯೋಚಿತ'ವಾಗಿ ಹಾಗೆ ಮಾಡುವುದು ಧರ್ಮಸಮ್ಮತವೆಂದು ಸೂಚಿಸುತ್ತದೆ. ಉದಾಹರಣೆಗೆ ಶೋಷಕನ ಬಗ್ಗೆ ಶೋಷಿತನ ದೂರು. ಶೋಷಣೆಯಿಂದ ಮುಕ್ತಗೊಳಿಸಲು ಏನನ್ನಾದರೂ ಮಾಡಬಹುದೆಂಬ ನಿರೀಕ್ಷೆಯಿರುವ ಯಾರ ಮುಂದೆ ಬೇಕಾದರೂ ಅವನು ದೂರಿಕೊಳ್ಳಬಹುದು. ಸುಧಾರಣೆಯ ಉದ್ದೇಶದಿಂದ ಯಾವುದೇ ವ್ಯಕ್ತಿ ಅಥವಾ ಸಮೂಹದ ಕೆಡುಕುಗಳನ್ನು, ಅದನ್ನು ದೂರೀಕರಿಸಲು ಏನನ್ನಾದರೂ ಮಾಡಬಹುದೆಂದು ನಿರೀಕ್ಷೆಯಿರುವ ಜನರ ಮುಂದೆ ಪ್ರಸ್ತಾಪಿಸಬಹುದು. ಧರ್ಮವಿಧಿ ಕೇಳುವ ಉದ್ದೇಶದಿಂದ ಯಾವುದಾದರೂ ಮುಫ್ತಿಯ ಮುಂದೆ ಯಾವುದೇ ವ್ಯಕ್ತಿಯ ದುಷ್ಕಾರ್ಯಗಳನ್ನು ಪ್ರಸ್ತಾಪಿಸಬಹುದು. ಯಾವುದಾದರೂ ವ್ಯಕ್ತಿಯ ಕೇಡಿನಿಂದ ಸುರಕ್ಷಿತವಾಗಿರಲು ಜನರಿಗೆ ಆ ವ್ಯಕ್ತಿಯ ಕೇಡಿನ ಬಗ್ಗೆ ಎಚ್ಚರಿಕೆ ನೀಡಬಹುದು. ಧರ್ಮಭ್ರಷ್ಟತೆ ಮತ್ತು ದುರಾಚಾರಗಳನ್ನು ಹರಡುತ್ತಿರುವ, ನವೀನಾಚಾರ ಮತ್ತು ಪಥಭ್ರಷ್ಟತೆಗಳನ್ನು ಪ್ರಚುರ ಪಡಿಸುತ್ತಿರುವ ಅಥವಾ ದೇವನ ಸೃಷ್ಟಿಗಳನ್ನು ಧರ್ಮರಾಹಿತ್ಯ ಮತ್ತು ಅಕ್ರಮ ಗೊಂದಲಗಳಲ್ಲಿ ಸಿಲುಕಿಸುತ್ತಿರುವವರ ವಿರುದ್ಧ ಬಹಿರಂಗವಾಗಿ ಸ್ವರವೆಬ್ಬಿಸಬಹುದು.

12. ಹಿಂದಾಡುವುದನ್ನು ಇಲ್ಲಿ ಮೃತ ಸಹೋದರನ ಮಾಂಸ ತಿನ್ನುವುದಕ್ಕೆ ಹೋಲಿಸಲಾಗಿದೆ. ಏಕೆಂದರೆ ಯಾರ ಬಗ್ಗೆ ಅವನ ಅನುಪಸ್ಥಿತಿಯಲ್ಲಿ ನಿಂದಿಸಲಾಗುತ್ತದೋ ಆ ಬಡಪಾಯಿ ಯಾರು ಎಲ್ಲಿ ತನ್ನ ಮಾನಮರ್ಯಾದೆಯ ಮೇಲೆ ದಾಳಿ ನಡೆಸುತ್ತಿದ್ದಾನೆ ಎಂಬ ಬಗ್ಗೆ ಅಜ್ಞನಾಗಿರುತ್ತಾನೆ.

ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರ ಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು.[13] ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.

وَّ اُنْثٰى وَجَعَلْنٰكُمْ شُعُوْبًا وَّقَبَآىِٕلَ
لِتَعَارَفُوْا ؕ اِنَّ اَكْرَمَكُمْ عِنْدَ اللّٰهِ اَتْقٰىكُمْ ؕ
اِنَّ اللّٰهَ عَلِيْمٌ خَبِيْرٌ ﴿١٣﴾

14. ಈ ಗ್ರಾಮೀಣ ಅರಬರು, "ನಾವು ವಿಶ್ವಾಸವಿರಿಸಿಕೊಂಡೆವು" ಎನ್ನುತ್ತಾರೆ.[14] ಅವರೊಡನೆ ಹೇಳಿರಿ; ನೀವು ವಿಶ್ವಾಸವಿರಿಸಲಿಲ್ಲ, ವಾಸ್ತವದಲ್ಲಿ, "ನಾವು ಶರಣಾಗತರಾದೆವು" ಎಂದು ನೀವು ಹೇಳ ಬೇಕು. ಸತ್ಯವಿಶ್ವಾಸವು ಇನ್ನೂ ನಿಮ್ಮ ಹೃದಯಗಳಲ್ಲಿ ಪ್ರವೇಶಿಸಿಲ್ಲ. ನೀವು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣೆ ಮಾಡಿದರೆ, ಅವನು ನಿಮ್ಮ ಕರ್ಮಗಳ ಪ್ರತಿಫಲದಲ್ಲಿ ಸ್ವಲ್ಪವೂ ಕಡಿತಗೊಳಿಸಲಾರನು. ನಿಶ್ಚಯವಾಗಿಯೂ ಅಲ್ಲಾಹನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

قَالَتِ الْاَعْرَابُ اٰمَنَّا ؕ قُلْ لَّمْ تُؤْمِنُوْا
وَلٰكِنْ قُوْلُوْۤا اَسْلَمْنَا وَلَمَّا يَدْخُلِ
الْاِيْمَانُ فِىْ قُلُوْبِكُمْ ؕ وَاِنْ تُطِيْعُوا
اللّٰهَ وَرَسُوْلَهٗ لَا يَلِتْكُمْ مِّنْ اَعْمَالِكُمْ
شَيْـًٔا ؕ اِنَّ اللّٰهَ غَفُوْرٌ رَّحِيْمٌ ﴿١٤﴾

15. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿದ್ದ ವರು, ಆ ಬಳಿಕ ಸ್ವಲ್ಪವೂ ಸಂಶಯಪಡದವರು ಮತ್ತು ತಮ್ಮ ಸಂಪತ್ತುಗಳಿಂದಲೂ ಶರೀರಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ

اِنَّمَا الْمُؤْمِنُوْنَ الَّذِيْنَ اٰمَنُوْا بِاللّٰهِ
وَرَسُوْلِهٖ ثُمَّ لَمْ يَرْتَابُوْا وَجٰهَدُوْا

13. ಹಿಂದಿನ ಸೂಕ್ತಗಳಲ್ಲಿ ಮುಸ್ಲಿಮ್ ಸಮಾಜವನ್ನು ಕೆಡುಕಿನಿಂದ ಸುರಕ್ಷಿತವಿರಿಸಲಿಕ್ಕಾಗಿ ಅವಶ್ಯವಿರುವ ನಿರ್ದೇಶನಗಳನ್ನು ನೀಡಲಾಗಿದೆ. ಈ ಸೂಕ್ತದಲ್ಲಿ ಸಮಸ್ತ ಮಾನವಕುಲವನ್ನು ಉದ್ದೇಶಿಸಿ, ಜಗತ್ತಿನಲ್ಲಿ ಸದಾ ವಿಶ್ವವ್ಯಾಪಿಯಾದ ಕ್ಷೋಭೆಗೆ ಕಾರಣವಾದ ಮಹಾನ್ ಪಥಭ್ರಷ್ಟತೆಯನ್ನು ತಿದ್ದಲಾಗಿದೆ. ಅರ್ಥಾತ್, ವಂಶ, ವರ್ಣ, ಭಾಷೆ, ರಾಷ್ಟ್ರ ಮತ್ತು ಜನಾಂಗದ ಪಕ್ಷಪಾತ. ಈ ಸಂಕ್ಷಿಪ್ತ ಸೂಕ್ತದಲ್ಲಿ ಅಲ್ಲಾಹನು ಸಮಸ್ತ ಮಾನವಕುಲವನ್ನುದ್ದೇಶಿಸಿ ಮೂರು ಮೂಲಭೂತ ವಾಸ್ತವಿಕತೆಗಳನ್ನು ವಿವರಿಸಿದ್ದಾನೆ. ಮೊದಲನೆಯದಾಗಿ ನಿಮ್ಮೆಲ್ಲರ ಮೂಲ ಒಂದೇ ಆಗಿದೆ. ಒಂದೇ ಸ್ತ್ರೀ ಮತ್ತು ಒಂದೇ ಪುರುಷನ ಮೂಲಕ ಸಮಸ್ತ ಮಾನವಕುಲ ಅಸ್ತಿತ್ವಕ್ಕೆ ಬಂದಿದೆ. ಇಂದು ಜಗತ್ತಿನಾದ್ಯಂತ ಹರಡಿರುವ ನಿಮ್ಮ ಜನಾಂಗಗಳೆಲ್ಲವೂ ಮೂಲತಃ ಒಂದೇ ತಂದೆ-ತಾಯಿಯ ಮೂಲಕ ಆರಂಭವಾದ ಜನಾಂಗದ ಶಾಖೆಗಳಾಗಿವೆ. ಎರಡನೆಯದಾಗಿ ಮೂಲದಲ್ಲಿ ನೀವೆಲ್ಲರೂ ಒಂದೇ ಆಗಿದ್ದರೂ ಅನೇಕ ವಂಶ ಮತ್ತು ಗೋತ್ರಗಳಾಗಿ ವಿಭಜನೆಗೊಂಡಿರುವುದೂ ಅತ್ಯಂತ ಸ್ವಾಭಾವಿಕ ವಿಷಯವಾಗಿದೆ. ಆದರೆ ಅದರ ಆಧಾರದಲ್ಲಿ ಉಚ್ಚ-ನೀಚ, ಮೇಲು-ಕೀಳು, ಶ್ರೇಷ್ಠ-ಅಧಮ ಮುಂತಾದ ಭೇದಗಳನ್ನು ಕಲ್ಪಿಸುವುದು, ಒಂದು ಜನಾಂಗ ಇನ್ನೊಂದರ ಬಗ್ಗೆ ಶ್ರೇಷ್ಠತೆಯನ್ನು ಮೆರೆಯುವುದು, ಒಂದು ವರ್ಣದ ಜನರು ಇನ್ನೊಂದು ವರ್ಣದ ಜನರನ್ನು ನೀಚನೆಂದು ಪರಿಗಣಿಸುವುದು, ಒಂದು ಜನಾಂಗ ಇನ್ನೊಂದಕ್ಕಿಂತ ಮೇಲ್ಮೆಯನ್ನು ವಾದಿಸುವುದು- ಇವಾವುದೂ ಈ ಸ್ವಾಭಾವಿಕ ಅಂತರದ ಬೇಡಿಕೆಗಳಲ್ಲ. ಸೃಷ್ಟಿಕರ್ತನು ಮಾನವ ಸಮೂಹವನ್ನು ವಂಶ ಮತ್ತು ಗೋತ್ರಗಳಲ್ಲಿ ವಿಭಜನೆ ಮಾಡಿರುವುದು ಅವರ ನಡುವೆ ಪರಸ್ಪರ ಸಹಕಾರ ಮತ್ತು ಪರಿಚಯಕ್ಕಾಗಿ ಇರುವ ಸ್ವಾಭಾವಿಕ ಸ್ವರೂಪ ಇದುವೇ ಆಗಿರುವುದರಿಂದಾಗಿದೆ. ಮೂರನೆಯದಾಗಿ ಮಾನವ-ಮಾನವರ ನಡುವೆ ಶ್ರೇಷ್ಠತೆ ಮತ್ತು ಮೇಲ್ಮೆಗೆ ಯಾವುದೇ ಆಧಾರವಿದ್ದರೆ ಅದು ನೈತಿಕ ಮೇಲ್ಮೆ ಮಾತ್ರವಾಗಿದೆ.

14. ಅರ್ಥಾತ್- ಬದವೀಗಳೆಲ್ಲರೂ ಎಂದಲ್ಲ. ಬದಲಾಗಿ ಇಲ್ಲಿ ಬದವೀಗಳ ಪೈಕಿಯ ಗುಂಪುಗಳನ್ನು ಮಾತ್ರ ಪ್ರಸ್ತಾವಿಸಲಾಗುತ್ತದೆ. ಅವರು ಹೆಚ್ಚುತ್ತಿರುವ ಮುಸ್ಲಿಮರ ಶಕ್ತಿಯನ್ನು ಕಂಡು, ನಾವು ಮುಸ್ಲಿಮರ ಹೊಡೆತದಿಂದಲೂ ಸುರಕ್ಷಿತವಾಗಿರುವೆವು. ಅಂತೆಯೇ ಇಸ್ಲಾಮಿನ ವಿಜಯಗಳಿಂದಲೂ ಪ್ರಯೋಜನ ಪಡೆಯುವೆವು ಎಂಬ ಭಾವನೆಯಿಂದಲೇ ಮುಸ್ಲಿಮರಾಗಿದ್ದರು. ಅವರು ವಾಸ್ತವದಲ್ಲಿ ಮನಸಾರೆ ಸತ್ಯವಿಶ್ವಾಸ ಸ್ವೀಕರಿಸಿರಲಿಲ್ಲ. ಕೇವಲ ನಾಲಗೆಯಿಂದ ಕರಾರು ಮಾಡುವ ಮೂಲಕ ಅವರು ಸ್ವಾರ್ಥಕ್ಕಾಗಿ ಮುಸ್ಲಿಮರಲ್ಲಿ ಶಾಮೀಲಾಗಿದ್ದರು.

بِاَمْوَالِهِمْ وَاَنْفُسِهِمْ فِیْ سَبِیْلِ
اللّٰهِ ؕ اُولٰٓئِكَ هُمُ الصّٰدِقُوْنَ ⑮

ಹೋರಾಡಿದವರೇ ವಾಸ್ತವದಲ್ಲಿ ಸತ್ಯವಿಶ್ವಾಸಿಗಳು- ಅವರೇ ಸತ್ಯವಂತರು.

قُلْ اَتُعَلِّمُوْنَ اللّٰهَ بِدِیْنِكُمْ ؕ وَاللّٰهُ
یَعْلَمُ مَا فِی السَّمٰوٰتِ وَمَا فِی الْاَرْضِ ؕ
وَاللّٰهُ بِكُلِّ شَیْءٍ عَلِیْمٌ ⑯

16. ಸಂದೇಶವಾಹಕರೇ, (ತಾವು ಸತ್ಯವಿಶ್ವಾಸಿಗಳೆಂದು ಸಾರಿಕೊಳ್ಳುತ್ತಿರುವವರೊಡನೆ) ಹೇಳಿರಿ, ನೀವೇನು ಅಲ್ಲಾಹನಿಗೆ ನಿಮ್ಮ ಧರ್ಮದ ಕುರಿತು ತಿಳಿಸುತ್ತಿರುವಿರಾ? ಅಲ್ಲಾಹನಂತೂ ಭೂಮಿ-ಆಕಾಶಗಳ ಸಕಲ ವಿಷಯಗಳನ್ನೂ ಅರಿತಿರುತ್ತಾನೆ ಮತ್ತು ಅವನು ಸಕಲ ವಿಷಯಗಳ ಜ್ಞಾನವುಳ್ಳವನಾಗಿರುತ್ತಾನೆ.

یَمُنُّوْنَ عَلَیْكَ اَنْ اَسْلَمُوْا ؕ قُلْ لَّا
تَمُنُّوْا عَلَیَّ اِسْلَامَكُمْ ۚ بَلِ اللّٰهُ یَمُنُّ
عَلَیْكُمْ اَنْ هَدٰىكُمْ لِلْاِیْمَانِ اِنْ
كُنْتُمْ صٰدِقِیْنَ ⑰

17. ತಾವು ಇಸ್ಲಾಮ್ ಸ್ವೀಕರಿಸಿಕೊಂಡಿದ್ದೇವೆನ್ನುತ್ತ (ಇವರು) ನಿಮ್ಮ ಮೇಲೆ ಉಪಕಾರ ಭಾರವನ್ನಿರಿಸುತ್ತಾರೆ. ಇವರೊಡನೆ ಹೇಳಿರಿ- ನಿಮ್ಮ ಇಸ್ಲಾಮಿನ ಉಪಕಾರ ಭಾರವನ್ನು ನನ್ನ ಮೇಲಿರಿಸಬೇಡಿರಿ. ವಾಸ್ತವದಲ್ಲಿ (ಸತ್ಯವಿಶ್ವಾಸಿಗಳೆಂದು ಹೇಳಿಕೊಳ್ಳುತ್ತಿರುವುದರಲ್ಲಿ) ನೀವು ಸತ್ಯವಂತರಾಗಿದ್ದರೆ ನಿಮಗೆ ಸತ್ಯವಿಶ್ವಾಸದ ದಾರಿತೋರಿಸಿದ್ದಕ್ಕಾಗಿ ಅಲ್ಲಾಹನು ನಿಮ್ಮ ಮೇಲೆ ತನ್ನ ಉಪಕಾರ ಭಾರವನ್ನಿರಿಸುತ್ತಾನೆ.

اِنَّ اللّٰهَ یَعْلَمُ غَیْبَ السَّمٰوٰتِ وَ
الْاَرْضِ ؕ وَاللّٰهُ بَصِیْرٌۢ بِمَا تَعْمَلُوْنَ ⑱

18. ನಿಶ್ಚಯವಾಗಿಯೂ ಅಲ್ಲಾಹನು ಭೂಮಿ-ಆಕಾಶಗಳ ಪ್ರತಿಯೊಂದು ರಹಸ್ಯದ ಜ್ಞಾನವುಳ್ಳವನಾಗಿದ್ದಾನೆ ಮತ್ತು ನೀವು ಮಾಡುತ್ತಿರುವುದೆಲ್ಲವನ್ನೂ ಅವನು ವೀಕ್ಷಿಸುತ್ತಿದ್ದಾನೆ.
